ಆಲ್ಲೂರ(ಬಿ) : ಮೇ 1994ರ ಅಂತ್ಯದೊಳಗೆ ಪೂರ್ತಿಗೊಳಿಸಲಾಗುವುದು.
ಬೆಳಗೇರಾ ಮತ್ತು
ಸಂಕನೂರ : ಜುಲೈ 1994ರ ಅಂತ್ಯದೊಳಗೆ ಪೂರ್ತಿಗೊಳಿಸಲಾಗುವುದು.

ರಾಜ್ಯದಲ್ಲಿ ಎಪಿಎಂಸಿ ಚುನಾವಣೆಗಳನ್ನು ನಡೆಸುವುದು

629 - ಶ್ರೀ ಶಿವಾನಂದ ಪಟೇಲ್ ಕಾಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಪಿಎಂಸಿ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು;

ಆ) ಎಪಿಎಂಸಿ ಚುನಾವಣೆಗಳನ್ನು ಬಹಳ ದಿನಗಳಿಂದ ನಡೆಸದೇ ಇರುವುದರಿಂದ ಎಪಿಎಂಸಿ ಆಡಳಿತ ಹದಗೆಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರದವರು ಎಪಿಎಂಸಿ ಚುನಾವಣೆಗಳನ್ನು ಕೂಡಲೇ ನಡೆಸಲು ಕ್ರಮಕೈಗೊಳ್ಳುವರೇ?

ಶ್ರೀ ಮದನಗೋಪಾಲ್ ನಾಯಕ್ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಚುನಾವಣೆ ನಡೆಸುವ ಅವಧಿಯು ಮುಂಬರುವ ಸಾರ್ವತ್ರಿಕ ಚುನಾವಣೆಗಳು ನಡೆಯುವ ಅವಧಿಯ ಸಮೀಪ ಬರುವ ಹಿನ್ನೆಲೆಯಲ್ಲಿ ಸರ್ಕಾರವು ಸದರಿ ಸಮಿತಿಗಳಿಗೆ ಚುನಾವಣೆ ನಡೆಸಲು ಸಾಧ್ಯವಾಗಲಾರದೆಂದು ಅಭಿಪ್ರಾಯಪಟ್ಟಿದೆ.

ಆ) ಇಲ್ಲ

ಇ) (ಅ)ವಲ್ಲಿಯ ಉತ್ತರವು ಇದಕ್ಕೂ ಸಂಬಂಧಿಸಿದೆ.

ರೈತರು ಸಬ್ಸಿಡಿ ಸೌಲಭ್ಯದಿಂದ ವಂಚಿತರಾಗಿರುವ ಬಗ್ಗೆ

633 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಂಕಲ್ ಪ್ರಸ್ತಾವನೆಗಳು ಜಾರಿಗೆ ಬಂದಲ್ಲಿ ಕೃಷಿ ಕ್ಷೇತ್ರದ ಮೇಲೆ ತೀವ್ರತರ ಪರಿಣಾಮ ಬೀಳುವುದು ನಿಜವೇ?

ಆ) ರಾಜ್ಯದ ರೈತರು ಸಬ್ಸಿಡಿ ಸೌಲಭ್ಯಗಳಿಂದ ವಂಚಿತರಾಗುವುದು ನಿಜವೇ?

ಇ) ಈ ಡಂಕಲ್ ಪ್ರಸ್ತಾವನೆಯನ್ನು ವಿರೋಧಿಸಿ, ರಾಜ್ಯ ಸರ್ಕಾರ ಏನಾದರೂ ನಿರ್ಧಾರ ಕೈಗೊಂಡಿದೆಯೇ?

ಈ) ಇಲ್ಲದಿದ್ದಲ್ಲಿ ರೈತರಲ್ಲಿ ಉಂಟಾಗಿರುವ ತೊಂದರೆ ಹಾಗೂ ಭೀತಿಯ ವಾತಾವರಣವನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಪುಟ್ಟಸ್ವಾಮಿಗೌಡ (ಕೃಷಿ ಸಚಿವರು) :

ಅ) ಭಾರತವು ತನ್ನ ಕೃಷಿ ನೀತಿ ಮತ್ತು ಕಾರ್ಯಕ್ರಮಗಳನ್ನು ಪಾಲಿಸಲು ಇರುವ ಸ್ವಾತಂತ್ರೀಯ ಮತ್ತು ಸಂಯಮವನ್ನು ಪ್ರತಿಕೂಲವಾಗಿ ಬಾಧಿಸುವ ಯಾವ ರೀತಿಯ ಅವಕಾಶವು ಡಂಕಲ್ ಪ್ರಸ್ತಾವನೆಯಲ್ಲಿ ಇರುವುದಿಲ್ಲ. ಆಹಾರ ಭದ್ರತೆ ಮತ್ತು ಆಹಾರ ನಿಧಿಯು ಸಂಪೂರ್ಣತೆ ಈ ವಿಷಯಗಳು ನಮಗೆ ಪ್ರಮುಖ ಅದ್ಯತೆಯಾಗಿರುತ್ತದೆ. ಈ ವಿಷಯಗಳಿಗೆ ಡಂಕಲ್ ಪ್ರಸ್ತಾವನೆಯಲ್ಲಿ ಮಾನ್ಯತೆ ನೀಡಲಾಗಿದೆ.

ಆ) ಇಲ್ಲಾ

ಇ) ಕೇಂದ್ರ ಸರ್ಕಾರವನ್ನು ರೈತರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಡಂಕಲ್ ಪ್ರಸ್ತಾವನೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳಲು ರಾಜ್ಯ ಸರ್ಕಾರವು ಕೋರಿದೆ.

ಈ) ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಚುನಾವಣೆಗಳನ್ನು ಮುಂದೂಡಿರುವುದು

634 ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತ ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿಗಳ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರುಗಳ ಚುನಾವಣೆಗಳನ್ನು ಸರ್ಕಾರ ಮುಂದಕ್ಕೆ ಹಾಕಿದೆಯೇ;

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು?

ಇ) ರಾಜ್ಯದ ಇತರ ಯಾವ ಯಾವ ಜಿಲ್ಲೆಗಳಲ್ಲಿ ಈ ರೀತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಚುನಾವಣೆಯನ್ನು ಮುಂದೆ ಹಾಕಲಾಗಿದೆ;

ಈ) ಈ ಚುನಾವಣೆಗಳನ್ನು ಯಾವಾಗ ನಡೆಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): ಅ) ಹೌದು.

ಆ) ಜಿಲ್ಲಾಧಿಕಾರಿಗಳು ಅಧ್ಯಕ್ಷ, ಉಪಾಧ್ಯಕ್ಷರ ಪುದ್ದೆಗಳಿಗೆ ಮೀಸಲಾತಿ ನಿಗದಿ ಪಡಿಸಿ ಹೊರಡಿಸಿದ ಆದೇಶವು ಸರಿಯಲ್ಲ ಎಂದು ಮನವಿಗಳು ಸ್ವೀಕೃತವಾದುದರಿಂದ.

ಇ) ರಾಜ್ಯದ 10 ಜಿಲ್ಲೆಗಳಲ್ಲಿ ಒಟ್ಟು 37 ತಾಲ್ಲೂಕುಗಳಲ್ಲಿ (ಪಟ್ಟಿ ಲಗತ್ತಿಸಿದೆ)

ಈ) 1994ರ ಮಾರ್ಚಿ 31 ರೊಳಗೆ ಈ ಚುನಾವಣೆಗಳನ್ನು ನಡೆಸಲಾಗುವುದು.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು
1	ಗುಲ್ಬರ್ಗಾ	ಎಲ್ಲಾ ತಾಲ್ಲೂಕುಗಳು.
2	ರಾಯಚೂರು	ಎಲ್ಲಾ ತಾಲ್ಲೂಕುಗಳು.
3	ಬಳ್ಳಾರಿ	ಸಿರಗುಪ್ಪ ತಾಲ್ಲೂಕು, ಹೊಸಪೇಟೆ ತಾಲ್ಲೂಕು, ಹರಪನಹಳ್ಳಿ ತಾಲ್ಲೂಕು, ಕೂಡ್ಲಗಿ ತಾಲ್ಲೂಕು.
4	ಬಿಜಾಪುರ	ಮುದ್ದೇಬಿಹಾಳ ತಾಲ್ಲೂಕು, ಬಸವನಬಾಗೇವಾಡಿ ತಾಲ್ಲೂಕು.
5	ಬೆಂಗಳೂರು (ಗ್ರಾಮಾಂತರ)	ಹೊಸಕೋಟೆ ತಾಲ್ಲೂಕು, ರಾಮನಗರ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕು, ನೆಲಮಂಗಲ ತಾಲ್ಲೂಕು.